ಶ್ರೀ ಬಿ. ರಾಚಯ್ಯ. — ಶಿಕ್ಷಣ ಸಚಿವರು.

(ಅ) ಬಂದಿದೆ.

(ಆ) ಸಂಬಂಧಪಟ್ಟ ರೇಕಾರ್ಡ್ ಇತ್ಯಾದಿ ಪೂರ್ಣವಾಗಿ ಒದಗದಿದ್ದ ಕಾರಣ ಪೂರ್ವ ಭಾವಿ ವಿಚಾರಣೆ ಮುಗಿದಿರುವುದಿಲ್ಲ. ಉಪ ನಿರ್ದೇಶಕರು ೨೭ನೇ ಸೆಪ್ಟೆಂಬರ್ ೧೯೮೩ ರಂದು ಅಂತಿಮ ವಿಚಾರಣೆನಡೆಸಲು ದಿನಾಂಕವನ್ನು ನಿಶ್ಚಯ ಪಡಿಸಿದ್ದಾರೆ.

ರೋಣ ತಾಲ್ಲೂಕಿನ ಯಾವಗಲ್ಲ ಗ್ರಾಮಕ್ಕೆ ಪಶುವೈದ್ಯ ಶಾಲೆಯನ್ನು ಮಂಜೂರು ಮಾಡುವ ಬಗ್ಗೆ

೨೩೧. ಶ್ರೀ ಯಾವಗಲ್ (ನರಗುಂದ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪಶು ಸಂಗೋಪನಾ ಹಾಗೂ ಪಶುವೈದ್ಯ ಮತ್ತು ತೋಟಗಾರಿಕೆ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ ?

(ಅ) ರೋಣ ತಾಲ್ಲೂಕಿನ ಯಾವಗಲ್ಲ ಗ್ರಾಮಕ್ಕೆ ಪಶುವೈದ್ಯ ಶಾಲೆಯೊಂದನ್ನು ಮಂಜೂರು ಮಾಡುವ ಸಲಹೆ ಸರಕಾರದವರ ಪರಿಶೀಲನೆಯಲ್ಲಿದೆಯೇ ?

(ಆ) ಮಂಜೂರಾಗದಿರುವುದಕ್ಕೆ ಕಾರಣಗಳೇನು ?

(ಇ) ಈ ಗ್ರಾಮಕ್ಕೆ ಪಶುವೈದ್ಯ ಶಾಲೆಯು ಯಾವಾಗ ಮಂಜೂರು ಕೊಡಲಾಗುವುದು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಸಂಗೊಪನಾ ಮತ್ತು ತೋಟಗಾರಿಕೆ ಮಂತ್ರಿಗಳು) —

(ಅ) ಈಗಾಗಲೆ ಒಂದು ಪಶುವೈದ್ಯ ಶಾಲೆಯನ್ನು ಯಾವಗಲ್ ಗ್ರಾಮಕ್ಕೆ ೧೯೮೨ ರಲ್ಲಿ ಮಂಜೂರು ಮಾಡಲಾಗಿದೆ.

(ಆ) }
(ಇ) } ಉದ್ಭವಿಸುವುದಿಲ್ಲ.

ಚಿಕ್ಕಮಗಳೂರಿನ ಜಿಲ್ಲೆಯಲ್ಲಿ ಕೃಷಿ ಕಾಲೇಜು ಪ್ರಾರಂಭಿಸುವ ಬಗ್ಗೆ

೧೯೦. ಶ್ರೀ ಟಿ. ತಿಪ್ಪಯ್ಯ (ಮೂಡಿಗೆರೆ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವ್ಯವಸಾಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ ?

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೃಷಿ ಕಾಲೇಜು ಪ್ರಾರಂಭಿಸುವ ಸಲಹೆ ಸರ್ಕಾರದವರಲ್ಲಿದೆಯೆ ?

(ಆ) ಮೂಡಿಗೆರೆಯಲ್ಲಿ ಈಗ ಇರುವ ಆರ್. ಆರ್. ಎಸ್, ಯೋಜನೆಯ ಜೊತೆಗೆ ಹೊಂದಿಕೊಂಡಿರುವ ೪೩೦ ಎಕರೆ ಜಮೀನಿನಲ್ಲಿಯೇ ಕೃಷಿ ಕಾಲೇಜು ಪ್ರಾರಂಭಿಸಲು ಸರ್ಕಾರದವರು ಪ್ರಯತ್ನಿಸುವರೇ ?

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು).—

(ಅ) ಇಲ್ಲ.

(ಆ) ಇಲ್ಲ.